**1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ನಂಜನಗೂಡು**

**ಸಿ.ಸಿಃ 1328/2017**

| | | | |
|---|---|---|---|
| ಸಾಕ್ಷಿದಾರರ ಹೆಸರು | | **ಪ್ರೇಮಾ** | ಪ್ರಾಸಾಃ 1 |
| ತಂದೆಯ/ಗಂಡನ ಹೆಸರು | | ನಾಗರಾಜು | ಚಾಸಾಃ 1 |
| ವಯಸ್ಸು | | 38 ವರ್ಷ | |
| ಕೆಲಸ | | ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘದಲ್ಲಿ ಸೇವಾ ಪ್ರತಿನಿಧಿಯಾಗಿ ಕೆಲಸ | ಸಾ ಪ್ರ ಬೋ |
| ವಾಸ | | ತಾಯೂರು | ದಿಃ 12/06/2024 |

**ಮುಖ್ಯ ವಿಚಾರಣೆ ಪ್ರಾಜ್ಞ ಸ.ಸ.ಅ ರವರಿಂದಃ**

ಆರೋಪಿ ಗೊತ್ತು. ಚಾಸಾ-2 ರಿಂದ 6 ಗೊತ್ತು. ದಿಃ18.04.2017 ರಂದು ಸಂಜೆ 6.30 ಗಂಟೆಗೆ ನಾನು ಸಂಘದ ಮಿಟಿಂಗ್ ಮುಗಿಸಿಕೊಂಡು ತಾಯೂರು ಗ್ರಾಮದ ನಮ್ಮ ಮನೆಗೆ ಬಂದಾಗ ಆರೋಪಿಯು ನಮ್ಮ ಮನೆಯ ಬಾಗಿಲಿಗೆ ಕಲ್ಲಿನಿಂದ ಹೊಡೆಯುತ್ತಿದ್ದನು. ನಾನು ಪ್ರಶ್ನಿಸಿದ್ದಕ್ಕೆ ಆರೋಪಿಯು ಸಾಲ ಬೇಕು ಎಂದು ಕೇಳಿದ, ಅದಕ್ಕೆ ನಾನು ನಿಮ್ಮ ಅಕ್ಕ ಊರಿನಲ್ಲಿ ಇಲ್ಲ ಆದ್ದರಿಂದ ಸಾಲ ನೀಡಲಾಗುವುದಿಲ್ಲ ಎಂದು ಹೇಳಿದ್ದೆ. ಅದಕ್ಕೆ ಆರೋಪಿಯು ಏಕಾಏಕಿ ನನ್ನ ಕುತ್ತಿಗೆ ಹಿಡಿದು ಕೆಳಕ್ಕೆ ಬಿಳಿಸಿ ಕಾಲಿನಿಂದ ನನ್ನ ಹೊಟ್ಟೆಗೆ ತುಳಿದಿರುತ್ತಾನೆ. ಜೊತೆಗೆ ಅಲ್ಲೆ ಬಿದ್ದಿದ್ದ ದೊಣ್ಣೆಯನ್ನು ತೆಗೆದುಕೊಂಡು ನನ್ನ ತಲೆಯ ಮಧ್ಯ ಭಾಗಕ್ಕೆ ಹೊಡೆದು ಗಾಯಪಡಿಸಿರುತ್ತಾನೆ. ಅಷ್ಟರಲ್ಲಿ ಚಾಸಾ 2 ಮತ್ತು ಡಿ ಬಂದು ಜಗಳ ಬಿಡಿಸಿದರು. ಆಗ ಆರೋಪಿಯು ನನ್ನನ್ನು ಉದ್ದೇಶಿಸಿ ನಿನ್ನನ್ನು ಇಷ್ಟಕ್ಕೆ ಬಿಡುವುದಿಲ್ಲ ಸಾಯಿಸುತ್ತೇನೆ ಎಂದು ಪ್ರಾಣ ಬೆದರಿಕೆ ಹಾಕಿರುತ್ತಾನೆ. ನನ್ನ ಗಂಡ ಚಾಸಾ 4 ರವರು ಒಂದು ವಾಹನವನ್ನು ತಂದು ನನ್ನನ್ನು ನಂಜನಗೂಡು ಸರ್ಕಾರಿ ಆಸ್ಪತ್ರೆಗೆ ಕರೆತಂದು ದಾಖಲಿಸಿರುತ್ತಾರೆ. ದಿಃ19.04.2017 ರಂದು ನಾನು ಆಸ್ಪತ್ರೆಯಲ್ಲಿ ಇದ್ದಾಗ ಪೊಲೀಸರು ಬಂದು ವೈದ್ಯರ ಸಮಕ್ಷಮ ಮದ್ಯಾಹ್ನ 1.55 ರಿಂದ 2.50 ರ ವರೆಗೆ ನನ್ನ ಹೇಳಿಕೆ ದೂರು ಪಡೆದಿರುತ್ತಾರೆ. ಸಾಕ್ಷಿಗೆ ಒಂದು ದಾಖಲಾತಿ ತೋರಿಸಿದ್ದು ಅದು ಹೇಳಿಕೆ ದೂರಾಗಿದ್ದು, ಹೇಳಿಕೆ ದೂರಿನಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ದೂರನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಆರೋಪಿಯು ನನಗೆ ಹೊಡೆಯಲು ಬಳಸಿದ್ದ ದೊಣ್ಣೆಯನ್ನು ನೋಡಿದರೆ ಗುರುತಿಸುತ್ತೇನೆ.ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ದೊಣ್ಣೆಯನ್ನು ಗುರುತಿಸಿ ಅದರಿಂದಲೇ ಆರೋಪಿ ನನಗೆ ಹೊಡೆದಿದ್ದು ಎಂದು ನುಡಿದಿದ್ದರಿಂದ ಸದರಿ ದೊಣ್ಣೆಯನ್ನು ಮು.ಮಾ 1 ಎಂದು

ಗುರುತಿಸಲಾಯಿತು. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ** ಆರೋಪಿ ಪರ ವಕೀಲರಿಂದಃ

ನನ್ನ ಗಂಡ ಮತ್ತು ಆರೋಪಿ ಅಣ್ಣ ತಮ್ಮಂದಿರ ಮಕ್ಕಳು ಎಂದರೆ ಸರಿ. ನಮ್ಮ ಮತ್ತು ಆರೋಪಿಯ ಮನೆ ಎದುರು ಬದುರಿನಲ್ಲಿ ಇದೆ ಎಂದರೆ ಸರಿ. ಆರೋಪಿಯ ಅಕ್ಕನನ್ನು ಬಿಳುಗಲಿ ಗ್ರಾಮಕ್ಕೆ ನೀಡಿ ಮದುವೆ ಮಾಡಲಾಗಿದೆ. ನನ್ನ ತವರು ಮನೆ ತಾಯೂರು ಮತ್ತು ನನ್ನ ಮದುವೆಯಾಗಿರುವುದು ತಾಯೂರು ಗ್ರಾಮ ಎಂದರೆ ಸರಿ. ನನ್ನ ತಂದೆಯ ತಂಗಿಯನ್ನು ಬಿಳುಗಲಿ ಗ್ರಾಮಕ್ಕೆ ನೀಡಿ ಮದುವೆ ಮಾಡಲಾಗಿದೆ. ಬಿಳುಗಲಿ ಗ್ರಾಮದಲ್ಲಿ ಆರೋಪಿಯ ಅಕ್ಕನ ಗಂಡನ ಮನೆಯಲ್ಲಿ ಗಲಾಟೆಯಾಗಿದ್ದರಿಂದಾಗಿ ಆರೋಪಿಯು ತನ್ನ ಅಕ್ಕನನ್ನು ತನ್ನ ಮನೆಗೆ ಕರೆದುಕೊಂಡು ಬಂದಿದ್ದ ಎಂದರೆ ಸಾಕ್ಷಿಯು ಗಲಾಟೆ ವಿಚಾರ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ಆರೋಪಿಯ ಅಕ್ಕ ತಾಯೂರಿನಲ್ಲಿ ಇದ್ದಾರೆ ಎಂದು ನುಡಿಯುತ್ತಾರೆ. ನನ್ನ ತಂದೆಯ ತಂಗಿ ಮರಮ್ಮ ರವರು ಆರೋಪಿಯ ಮನೆಗೆ ಬಂದು ಆರೋಪಿಯ ಅಕ್ಕನಿಗೆ ಬುದ್ಧಿವಾದ ಹೇಳುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾನು ಸಂಘದ ಮಿಟಿಂಗ್ ಮುಗಿಸಿಕೊಂಡು ಮನೆಗೆ ಬಂದಾಗ ನನ್ನ ಅತ್ತೆ ಮರಮ್ಮ ಆರೋಪಿಯ ಮನೆಯಲ್ಲಿ ಇದ್ದರು ಎಂದರೆ ಸರಿಯಲ್ಲ. ನಾನು ಸಂಘದ ಮಿಟಿಂಗ್ ಮುಗಿಸಿಕೊಂಡು ಆರೋಪಿ ಮನೆಗೆ ಹೋದೆ ಎಂದರೆ ಸರಿಯಲ್ಲ. ನನ್ನ ಅತ್ತೆ ಮರಮ್ಮನೊಂದಿಗೆ ನಾನು ಕೂಡ ಆರೋಪಿಯ ಅಕ್ಕನಿಗೆ ಬುದ್ಧಿವಾದ ಹೇಳುತ್ತಿದ್ದೆ ಎಂದರೆ ಸರಿಯಲ್ಲ. ನನ್ನ ಬುದ್ಧಿವಾದವನ್ನು ಯಾರು ಕೇಳಲಿಲ್ಲ ಎಂದರೆ ಸರಿಯಲ್ಲ. ನಾವು ಈಗ ಬೇರೆ ಮನೆ ಮಾಡಿಕೊಂಡಿದ್ದೇವೆ ಎಂದರೆ ಸರಿ. ನಮ್ಮ ಮನೆಯಲ್ಲಿ ಆರೋಪಿಯು ಭಾಗ ಕೇಳಿದ್ದ ಎಂದರೆ ಸರಿಯಲ್ಲ. ಆರೋಪಿಯು ಭಾಗ ಕೇಳುವಾಗ ಆತನ ಚಿಕ್ಕಪ್ಪ ಶೇಖರಯ್ಯ ಮತ್ತು ಪುಟ್ಟಸ್ವಾಮಿ ಇದ್ದರು ಎಂದರೆ ಸರಿಯಲ್ಲ. ನಾನು ಈ ಹಿಂದೆ ನನ್ನ ಅತ್ತೆಯ ವಿರುದ್ದ ಒಂದು ಕ್ರಿಮಿನಲ್ ಪ್ರಕರಣ ದಾಖಲಿಸಿದ್ದೆ ಎಂದರೆ ಸರಿ. ನಾನು ಎಲ್ಲಾ ವಿಚಾರಗಳನ್ನು ಮನಸಿನಲ್ಲಿ ಇಟ್ಟುಕೊಂಡು ಆರೋಪಿಯ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ ತಂದೆಗೆ ಕಣ್ಣು ಕಾಣಿಸುವುದಿಲ್ಲ ಮತ್ತು ಅವರಿಗೆ ಓಡಾಡುವುದು ಕಷ್ಟ ಎಂದರೆ ಸರಿ. ಮು.ಮಾ 1 ದೊಣ್ಣೆ ಸಾಮಾನ್ಯವಾಗಿ ಹಳ್ಳಿಗಳಲ್ಲಿ ಎಲ್ಲರ ಮನೆಯಲ್ಲಿ ಸೌದೆಗೆ ಬಳಸುತ್ತಾರೆ ಎಂದರೆ ಸರಿ. ನಮ್ಮ ಮನೆಯ ಮುಂದೆ ಕಾಂಕ್ರಿಟ್ ರಸ್ತೆ

ಮತ್ತು ಚರಂಡಿ ಆಗಿದೆ ಎಂದರೆ ಸರಿ. ರಸ್ತೆಯು ಸ್ವಚ್ಚವಾಗಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಖಾಲಿ ನಿವೇಶನದಲ್ಲಿ ಕಸ ಹಾಕುತ್ತಾರೆ ಎಂದು ನುಡಿಯುತ್ತಾರೆ. ಗಲಾಟೆಯಾಗುವಾಗ ನಮ್ಮ ಸಂಬಂಧಿಕರಾದ ಶೇಖರಯ್ಯ ಮತ್ತು ಪುಟ್ಟಸ್ವಾಮಿ ಅವರ ಮನೆಯಲ್ಲಿ ಇರಲಿಲ್ಲ. ಮನೆ ಕಟ್ಟುವಾಗ ನಾನೇ ಬಿದ್ದು ಪೆಟ್ಟು ಮಾಡಿಕೊಂಡು ಆರೋಪಿ ವಿರುದ್ದ ಸುಳ್ಳು ದೂರು ನೀಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯು ನನ್ನ ಬಳಿ ಬಂದು ಯಾವುದೇ ಸಾಲ ಕೇಳಿಲ್ಲ ಎಂದರೆ ಸರಿಯಲ್ಲ. ನಮ್ಮಲ್ಲಿ ಗಲಾಟೆಯಾದಾಗ ಪಂಚಾಯ್ತಿ ಸೇರುತ್ತಾರೆ ಎಂದರೆ ಸರಿಯಲ್ಲ. ಆರೋಪಿಯು ಮೈಸೂರಿಗೆ ಕೆಲಸಕ್ಕೆ ಹೋದರೆ ಸಂಜೆ 7 ಗಂಟೆಗೆ ಬರುತ್ತಾರೆ ಎಂದರೆ ಸಾಕ್ಷಿಯು ಆತ ಆ ದಿನ ರಜೆ ಹಾಕಿದ್ದ ಎಂದು ನುಡಿಯುತ್ತಾರೆ. ನಮ್ಮ ಊರಿಗೆ ಬಸ್ಸಿನ ಸೌಕರ್ಯ ಕಡಿಮೆ ಎಂದರೆ ಸರಿ. ನನ್ನ ಮಾತನ್ನು ಆರೋಪಿಯ ಮನೆಯವರು ಉದಾಸೀನ ಮಾಡಿದರು ಎಂದು ಆರೋಪಿ ವಿರುದ್ದ ಸುಳ್ಳು ದೂರು ನೀಡಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

ಸಹಿ/-

**1ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ**

**ನಂಜನಗೂಡು**